# ಭ್ರಮನಿರಸಿತ ವಿದ್ಯಾರ್ಥಿನಿಯ ಲೇಖನಿಯಿಂದ

**ಸಂವಿದಾ ಎಸ್. ವೆಂಕಟೇಶ್**

ನಿನ್ನೆ ನನ್ನ ಕೆಳಗಿನ ತರಗತಿ ವಿದ್ಯಾರ್ಥಿನಿಯೊಬ್ಬಳು ಕರೆ ಮಾಡಿ "ಸಂವಿದಾ, ನಾಳೆ ನನ್ನ ಭೌತಶಾಸ್ತ್ರ ಪರೀಕ್ಷೆಯಿದೆ ಮತ್ತು ನನಗೆ ಅದರಲ್ಲಿ ಕೆಲವೊಂದು ವಿಷಯ ಸ್ಪಷ್ಟವಾಗಿಲ್ಲ. ಸ್ವಲ್ಪ ಹೇಳಿಕೊಡ್ತೀರಾ?" ಎಂದು ಕೇಳಿದಳು. ಸಂತೋಷದಿಂದಲೇ ಒಪ್ಪಿಕೊಂಡೆ ಮತ್ತು ಆಕೆಯೊಂದಿಗೆ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಲು ಕೆಲ ನಿಮಿಷಗಳನ್ನು ಕಳೆದೆ. ಆಕೆ ಇನ್ನೂ ಕಲಿಯದಿರುವ ಒಂದು ಪರಿಕಲ್ಪನೆಗೆ ನಾವು ತಲುಪಿದಾಗ, ನಾನು ಅದನ್ನು ಆಕೆಗೆ ವಿವರಿಸಲು ಪ್ರಾರಂಭಿಸಿದೆ, ಆದರೆ ಆಕೆ ನನ್ನನ್ನು ಅರ್ಧದಲ್ಲಿಯೇ ತಡೆದು ನಿಲ್ಲಿಸಿ, "ಅದು ಪರವಾಗಿಲ್ಲ ಬಿಡಿ, ನಮಗಿನ್ನೂ ಅದನ್ನು ಹೇಳಿಕೊಟ್ಟಿಲ್ಲ. ಅದು ಪ್ರಶ್ನೆ ಪತ್ರಿಕೆಯಲ್ಲಿ ಬರಲು ಸಾಧ್ಯವಿಲ್ಲ," ಎಂದು ಆಕೆ ಆತ್ಮವಿಶ್ವಾಸದಿಂದಲೇ ನನಗೆ ಭರವಸೆ ನೀಡಿದಳು. ನಾನು ತುಸು ಕಸಿವಿಸಿಯಿಂದಲೇ ಫೋನ್ ಕೆಳಗಿಟ್ಟೆ.

"ಅದು ನಿಗದಿತ ಪಠ್ಯದಲ್ಲಿ ಇಲ್ಲ"–ನನ್ನ ಮಟ್ಟಿಗೆ ಈ ಒಂದು ಮಾತು ನಮ್ಮ ಶಿಕ್ಷಣ ವ್ಯವಸ್ಥೆಯ ಅತ್ಯಂತ ದೊಡ್ಡ ನ್ಯೂನ್ಯತೆಯನ್ನು ಸಂಕೇತಿಸುತ್ತದೆ: ಅಂದರೆ ಪರೀಕ್ಷೆಯಲ್ಲಿ ಪಾಸಾಗಲೋಸ್ಕರ ಮಾತ್ರವೇ ಕಲಿಯುವುದು.

ನಾನು ಈಗ ಅರ್ಧ–ಅವಧಿಯ ಮಧ್ಯದಲ್ಲಿದ್ದೇನೆ. ನನ್ನ ಸಹಪಾಠಿಗಳೆಲ್ಲರೂ ಭೌತಶಾಸ್ತ್ರ, ಅಂಕಿಗಳು ಮತ್ತು ಸಾವಯವ ರಸಾಯನಶಾಸ್ತ್ರದ ಪಠ್ಯಪುಸ್ತಕಗಳನ್ನು ತಮ್ಮ ಪಕ್ಕ ಇಟ್ಟುಕೊಂಡು ರಾತ್ರಿಯಿಡೀ ಅವುಗಳ ಅಧ್ಯಯನದಲ್ಲಿ ತಲ್ಲೀನರಾಗಿರುತ್ತಾರೆ. ಆದರೆ ನಾನು? ವಿಜ್ಞಾನದ ವಿದ್ಯಾರ್ಥಿಯಾಗಿದ್ದೂ, ನಾನು ಜಾಗತಿಕ ಇತಿಹಾಸ ಮತ್ತು ಸಮಗ್ರ ಅರ್ಥಶಾಸ್ತ್ರದ (Macroeconomics) ಮೇಲಿನ ಖಾನ್ ಅಕಾಡೆಮಿಯ ವಿಡಿಯೋವನ್ನು ವೀಕ್ಷಿಸುತ್ತಿದ್ದೇನೆ ಯಾಕೆಂದರೆ ನನಗವು ಆಸಕ್ತಿದಾಯಕವಾಗಿವೆ ಆದರೆ ಮನಸ್ಸಿನಲ್ಲಿ ಒಂದು ಕುರುಕುರು ನನಗೆ ತಿಳಿಹೇಳುತ್ತಿದೆ "ಸಂವಿದಾ ಇವು ಯಾವುವೂ ನಿನ್ನ ನಿಗದಿತ ಪಠ್ಯದಲ್ಲಿಲ್ಲ, ಹೋಗು ಉಪಯುಕ್ತವಾದ ಕೆಲಸದಲ್ಲಿ ತೊಡಗಿಸಿಕೊ". ನ್ಯಾಯವಾಗಿ ನನಗೆ ಇಂಥ ಕುರುಕುರು ಭಾವ ಬರಕೂಡದು. ಯಾಕೆಂದರೆ ನನಗೆ ಕಲಿಯಲು ಸಹಾಯಕಾರಿಯಾಗುವುದು ಶಿಕ್ಷಣದ ಉದ್ದೇಶವಾಗಿರಬೇಕೇ ಹೊರತು, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಸಹಾಯ ಮಾಡುವುದಲ್ಲ, ಆದಾಗ್ಯೂ ನಾನು ನಾಳೆಯ ತರಗತಿ ಕೆಲಸದಲ್ಲಿ (assignment) ಅಥವಾ ಮುಂದಿನ ತಿಂಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಲೋಸ್ಕರ ಕಲಿಯುತ್ತಿದ್ದೇನೆಂಬುದನ್ನು ನಾನು ಗಮನಿಸುತ್ತಿದ್ದೇನೆ. ಈ ತೆರನಾದ ಧೋರಣೆ ಎಲ್ಲಿಂದ ಬಂತು?

ಪ್ರತಿದಿನವೂ, ತರಗತಿ ಕೋಣೆಗಳಲ್ಲಿ ಮತ್ತು ಮನೆಗಳಲ್ಲಿ ಈ ಮನೋ ಧೋರಣೆಯು ನನ್ನ ಸುತ್ತ ಇನ್ನಷ್ಟು ಬಿಗಿ ಬಳ್ಳಿಯಾಗಿ ಹಬ್ಬುತ್ತಿರುವುದನ್ನು ನಾನು ಗಮನಿಸುತ್ತೇನೆ. ತರಗತಿಯಲ್ಲಿ ಒಬ್ಬ ಗೆಳೆಯನಲ್ಲಿ ಯಾವುದಾದರು ಒಂದು ಸಂಶಯವನ್ನು ಕುರಿತು ವಿಚಾರಿಸುವಾಗ ಅದು ಮೆಲ್ಲಗೆ ಚಿಗುರಲಾರಂಭಿಸುತ್ತಿತ್ತು. –"ಅದು ಪೋರ್ಶನ್‌ನಲ್ಲಿ ಇಲ್ಲ, ಚಿಂತೆ ಮಾಡಬೇಡ." ಒಬ್ಬ ಶಿಕ್ಷಕರು ಒಂದು ಅಧ್ಯಾಯವನ್ನು ಇನ್ನೂ ವಿವರವಾಗಿ ಹೇಳಿಕೊಡಲಾ ಎಂದು ಕೇಳಿದಾಗ–"ಮ್ಯಾಡಂ, ಪಠ್ಯ ಪುಸ್ತಕದಲ್ಲಿ ಇದರ ಬಗ್ಗೆ ಕೇವಲ ನಾಲ್ಕು ವಾಕ್ಯಗಳು ಮಾತ್ರ ಇವೆ, ಇವುಗಳ ಕುರಿತು ನಮಗೆ ಹೆಚ್ಚಿಗೆ ಹೇಳಿದರೆ ಅದು ನಮ್ಮಲ್ಲಿ ಮತ್ತಷ್ಟು ಗೊಂದಲವನ್ನು ಮಾತ್ರ ಉಂಟುಮಾಡುತ್ತವೆ" ಎಂಬ ಪ್ರತಿಕ್ರಿಯೆ ಬರುವುದು. ಒಬ್ಬ ಜೀವಶಾಸ್ತ್ರದ ವಿದ್ಯಾರ್ಥಿಯು ತಾನು ಮೋಜಿಗಾಗಿ ಕಂಪ್ಯೂಟರ್ ಪ್ರೋಗ್ರಾಮ್‌ಗಳನ್ನು ಬರೆಯುತ್ತೇನೆ ಎಂದು ಹೇಳಿದರೆ ಆಕೆಯು ಹಲವು ವಿಧದ ನೋಟಗಳಿಗೆ ಗುರಿಯಾಗುವಳು–ಕೆಲವು ಕುತೂಹಲಭರಿತ ನೋಟಗಳಾದರೆ ಇನ್ನು ಕೆಲವು ಮಹಾ ಮಹಾ ಎಂದು ಅಣಕಿಸುವಂತಹದಾಗಿರುತ್ತವೆ.

ಆದರೆ ಅದು ಇನ್ನಷ್ಟು ಬೆಳೆಯುತ್ತಾ ಹೋಗುತ್ತದೆ. ನಿಗದಿತ

ಪಠ್ಯವಸ್ತುವಿನ ಹೊರಗಿರುವ ವಿಷಯಗಳನ್ನು ಕೈಗೆತ್ತಿಕೊಳ್ಳಲು ಶಿಕ್ಷಕರು ನಿರಾಕರಿಸುವರು. ಪೊಷಕರು ನಿಮ್ಮ ವಿಶೇಷ ಪಠ್ಯ ವಿಷಯಗಳಿಗೆ ಸಂಬಂಧಿಸದಿರುವ ವಿಷಯಗಳನ್ನು ಓದದಂತೆ ನಿಮ್ಮನ್ನು ನಿರ್ಬಂಧಿಸುವರು. ನೀವು ಜಂಟಿ ಪ್ರವೇಶ ಪರೀಕ್ಷೆ (JEE) ಆಕಾಂಕ್ಷಿಯಾಗಿದ್ದರೆ, ನಿಮ್ಮ ಕೋಚಿಂಗ್ ಸಂಸ್ಥೆಯು ಜೀವಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ವಾಸ್ತುಶಿಲ್ಪ ಮತ್ತು ಸಾವಿರಾರು ಇತರ ವಿಷಯಗಳ ಮೇಲಿನ ಪುಸ್ತಕಗಳಿಂದ ನಿಮ್ಮನ್ನು ಬಹು ದೂರವಿಡುತ್ತದೆ. –"ನಿಮ್ಮ ಗಮನವನ್ನು ಕೇಂದ್ರೀಕರಿಸಲು ನಿಮಗೆ ಸಹಾಯ ಮಾಡಲು ಮಾತ್ರ ಹೀಗೆ ಮಾಡಲಾಗಿದೆ" ಎನ್ನುವುದು ನಿಮಗೆ ನೀಡಲಾಗುವ ನೆಪವಾಗಿರುತ್ತದೆ. ಯಾವುದರ ಮೇಲೆ ಗಮನ ಕೇಂದ್ರೀಕರಿಸುವುದು? ಪರೀಕ್ಷೆಯಲ್ಲಿ ಉತ್ತಮವಾಗಿ ಸಾಧನೆ ಮಾಡುವುದೆ?

ಆದುದರಿಂದ, ನನ್ನ ಪ್ರಕಾರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಮಾತ್ರ ಅಧ್ಯಯನ ಮಾಡುವುದರ ಮೇಲಿನ ಅತಿಯಾದ ಒತ್ತು ಒಂದು ಅತ್ಯಂತ ಅಶಕ್ತಗೊಳಿಸುವ ಶಾಲಾ ಪರಿಸರಕ್ಕೆ ಕಾರಣವಾಗುತ್ತದೆ. ಒಂದು ಪರೀಕ್ಷೆಗಾಗಿ ಮಾತ್ರವೇ ಕಲಿಯುವ ವಿದ್ಯಾರ್ಥಿಗಳನ್ನು ಹೊಣೆ ಮಾಡಲು (ನನ್ನನ್ನೂ ಒಳಗೊಂಡಂತೆ) ನನಗೆ ಸಾಧ್ಯವಾಗದು. ಆ ಪರೀಕ್ಷೆಯು ನಿಮ್ಮ ಕಾಲೇಜು, ನಿಮ್ಮ ವೃತ್ತಿ ಜೀವನ ಮತ್ತು ಇವೆಲ್ಲದರ ಬಳಿಕ ನೀವು ನಡೆಸಬೇಕಾದ ಬದುಕಿನ ರೀತಿಯನ್ನು ನಿರ್ಧರಿಸುವಂತಹದ್ದಾಗಿರಬಹುದು. ಆದರೆ ಅದು ಹಾಗಿರಕೂಡದು. ನೀವು ಹದಿನಾರು ವರ್ಷ ಪ್ರಾಯದವರಾಗಿರುವಾಗ ಬರೆಯುವ ಪರೀಕ್ಷೆಗಳ ಗೊಂಚಲುಗಳ ಮೇಲೆ ನಿಮ್ಮ ಭವಿಷ್ಯ ನೇತಾಡಬಾರದು. ನಿಮ್ಮ ಒಂದು ಪರೀಕ್ಷೆಯ ಅಂಕದ ಆಧಾರದಲ್ಲಿ ನಿಮ್ಮ ಕಾಲೇಜು ನಿಮ್ಮನ್ನು ಅಳೆಯಬಾರದು. ನಿಮ್ಮ ಭಾವೀ ಉದ್ಯೋಗದಾತರು ನಿಮ್ಮ ಕಾಲೇಜಿನ ಶ್ರೇಣಿ ಬಿಂದು ಸರಾಸರಿಯನ್ನು (GPA) ಆಧರಿಸಿ ನಿಮ್ಮನ್ನು ನೇಮಕಾತಿ ಮಾಡಬಾರದು.

ನಾನು ಇಲ್ಲಿ ಪರೀಕ್ಷೆಗಳನ್ನೇ ರದ್ದುಗೊಳಿಸಬೇಕೆಂಬುದನ್ನು ಸೂಚಿಸುತ್ತಿಲ್ಲ. ಅದು ಹುಟ್ಟು ಹಾಕುವ ಗೊಂದಲಗಳನ್ನು ಕುರಿತು ಊಹಿಸುವುದೇ ಭಯಾನಕವಾಗಿದೆ. ಆದರೆ ಪರೀಕ್ಷೆ ನಡೆಸುವ ಹೆಚ್ಚು ಪರಿಣಾಮಕಾರಿಯಾದ ವಿಧಾನವನ್ನು ನಾವು ಕಂಡು ಹಿಡಿಯಬೇಕು. "ಪರೀಕ್ಷೆಯು" ಒಂದು ಕಟ್ಟುನಿಟ್ಟಿನ ಕಣ್ಗಾವಲಿನಡಿಯಲ್ಲಿರುವ ಪರೀಕ್ಷಾ ಕೊಠಡಿಯಲ್ಲಿ ನೀವು ಮೂರು ಗಂಟೆಗಳ ಕಾಲ ಬರೆಯುವ ಪತ್ರಿಕೆಯಾಗಿರಬೇಕಾದ ಅಗತ್ಯವಿಲ್ಲ. ಪರೀಕ್ಷೆಗಳು ಮತ್ತು ಅಂತಿಮವಾಗಿ ಈ ಪರೀಕ್ಷೆಗಳಿಗೆ ನಾವು ಎಷ್ಟು ಪ್ರಾಮುಖ್ಯತೆ ನೀಡುವೆವು ಎಂಬುದರ ಮೇಲಿನ ನಮ್ಮ ಚಿಂತನೆಗಳನ್ನು ಇನ್ನಷ್ಟು ವಿಸ್ತಾರಗೊಳಿಸಬೇಕಾದ ಅಗತ್ಯವಿದೆ.

ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಗೊಣಗಾಡುವುದು ಸುಲಭ, ಆದರೆ ಪ್ರಶಂಸಿಸುವುದು ಬಹಳ ಕಷ್ಟ. ಭಾರತೀಯ ಶಾಲಾ ವ್ಯವಸ್ಥೆಯ ಒಂದು ಉತ್ಪನ್ನವಾಗಿ (ಅಥವಾ ಒಬ್ಬ ಬಲಿಪಶುವೆಂದು ನಾನು ಹೇಳಬೇಕೆ?), ನನ್ನ ಶಾಲಾ ಪರಿಸರದ ಬಗ್ಗೆ ನನ್ನಲ್ಲಿ ಕೇಳಿದಾಗ ನಾನು ಯಾವಾಗಲೂ ಸಿನಿಕಳಾಗಿರುತ್ತೇನೆ. ಆದರೆ ನನ್ನಂತೆ ಇರುವವರ ದೂರುಗಳ ಮೂಲಕವೇ ವ್ಯವಸ್ಥೆಯು ವಿಕಸನಗೊಳ್ಳುವುದು? ನನ್ನಂತಹ ವಿದ್ಯಾರ್ಥಿಗಳು ಇಲ್ಲಿನ ಆಭಾಸಗಳನ್ನು ಎತ್ತಿತೋರಿಸದ ಹೊರತು, ಇಲ್ಲಿ ಪ್ರತಿಯೊಂದು ಕೂಡಾ ಅತ್ಯುತ್ಕೃಷ್ಟವೆಂದು ಕಾಣುವುದು ಹಾಗು ಯಾವುದೂ ಎಂದಿಗೂ ಬದಲಾಗದು. ಒಂದು ಶಿಕ್ಷಣ ವ್ಯವಸ್ಥೆಯು ನಿಂತ ನೀರಾಗಬಾರದು, ಅದು ತಾನು ರೂಪಿಸುವ ಸಮಾಜದ ಬೇಡಿಕೆಗಳನ್ನು ನೆರವೇರಿಸಲು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಒಂದು ಹರಿಯುವ ನದಿಯಾಗಿ ಪರಿವರ್ತನೆಗೊಳ್ಳಬೇಕು.



**ಸಂವಿದಾ** ಬೆಂಗಳೂರಿನ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಓದುತ್ತಿರುವ 16 ವರ್ಷದ ವಿದ್ಯಾರ್ಥಿನಿ ಅವರನ್ನು samvida.venkatesh@gmail.com ನಲ್ಲಿ ಸಂಪರ್ಕಿಸಬಹುದು

